# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 400 |
| 2 ಸದಸ್ಯರ ಹೆಸರು | : | ಪಿ.ಹೆಚ್ ಪೂಜಾರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 ಉತ್ತರಿಸಬೇಕಾದ ದಿನಾಂಕ | : | 29.01.2026 |
| 4 ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಿಲ್ಲೆಗಳಲ್ಲಿ ಸ್ಥಾಪಿಸಿದ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಸೆಲ್ ಪೊಲೀಸ್ ಠಾಣೆಗಳಿಗೆ ಡಿವೈಎಸ್‌ಪಿಗಳ ನೇಮಕವಾಗದೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರಕರಣಗಳ ನಿಯಂತ್ರಣ ತನಿಖೆಗೆ ಹಿನ್ನಡೆಯಾಗುತ್ತಿದೆ ಎಂಬ ಗಂಭೀರವಾದ ಅಂಶ ಸರ್ಕಾರದ ಗಮನಕ್ಕೆ ಬಂದೆದೆಯೇ; ಬಂದಿದ್ದರೆ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ➢ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/80/ಪಿಓಪಿ/2023, ದಿನಾಂಕ: 19.11.2024 ರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಬೆಂಗಳೂರು ನಗರ ಒಳಗೊಂಡಂತೆ ಒಟ್ಟು 33 ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿರುತ್ತದೆ.<br>➢ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 64 ಪಿಓಪಿ 94, ಬೆಂಗಳೂರು ದಿ:28.06.1995ರ ಪ್ರಕಾರ ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯ್ದೆ ಕಲಂ 9ರ ರಲ್ಲಿ ವಿವರಿಸಿರುವಂತೆ ಪಿಎಸ್‌ಐ ಮತ್ತು ಮೇಲ್ಪಟ್ಟ ದರ್ಜೆಯ ಅಧಿಕಾರಿಗಳಿಗೆ ಪ್ರಕರಣಗಳನ್ನು ತನಿಖೆ ಮಾಡುವ ಅಧಿಸೂಚನೆ ಹೊರಡಿಸಲಾಗಿರುತ್ತದೆ, ಆದಾಗ್ಯೂ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 80 ಪಿಓಪಿ 2023, ದಿನಾಂಕ:19.11.2024 ರಲ್ಲಿ ಡಿಸಿಆರ್‌ಇ ಘಟಕದ ಎಲ್ಲಾ 33 ಪೊಲೀಸ್ ಠಾಣೆಗಳಿಗೆ ಡಿವೈಎಸ್‌ಪಿ ದರ್ಜೆಯ ಪೊಲೀಸ್ ಠಾಣೆಯೆಂದು ಘೋಷಿಸಲಾಗಿರುತ್ತದೆ.<br>➢ ಅದರಂತೆ 33 ಡಿಸಿಆರ್‌ಇ ಪೊಲೀಸ್ ಠಾಣೆಗಳಿಗೆ ಠಾಣಾಧಿಕಾರಿಯಾಗಿ (SHO) 12 ಡಿವೈಎಸ್‌ಪಿ ಮತ್ತು 21 ಪೊಲೀಸ್ ಇನ್ಸ್‌ಪೆಕ್ಟರ್ ಮಂಜೂರಾತಿ ಬಲ ಇರುತ್ತದೆ. ಅದರಲ್ಲಿ ಈಗಾಗಲೆ ಮಂಜೂರಾಗಿರುವ ಎಲ್ಲಾ 12 ಡಿವೈಎಸ್‌ಪಿ ಹುದ್ದೆಗಳು ಭರ್ತಿಯಾಗಿರುತ್ತದೆ, ಪ್ರಸ್ತುತ 21 ಪಿಐ ಹುದ್ದೆಗಳನ್ನು ಡಿವೈಎಸ್‌ಪಿ ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

<table>
<tr>
<td>ಆ)</td>
<td>ರಾಜ್ಯದಲ್ಲಿನ ಎಸ್.ಸಿ/ಎಸ್.ಟಿ ದೌರ್ಜನ್ಯ ಪ್ರಕರಣಗಳ ಸಂಖ್ಯೆಯನ್ನು ತಡೆಗಟ್ಟಲು ಪ್ರಭಾರಿಗಳನ್ನು ನೇಮಿಸಲಾಗಿದೆಯೇ; ಹಾಗೂ ರಾಜ್ಯದಲ್ಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಎಷ್ಟು?</td>
<td>ಎಸ್.ಸಿ/ಎಸ್‌ಟಿ ಜನರ ಮೇಲಿನ ದೌರ್ಜನ್ಯ ತಡೆಗಟ್ಟಲು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>1) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 80 ಪಿಒಪಿ 2023, ದಿನಾಂಕ:06.12.2024ರ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 33 ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಜುಲೈ 2025ರಲ್ಲಿ ತೆರೆಯಲಾಗಿರುತ್ತದೆ. ಈ ಪೊಲೀಸ್ ಠಾಣೆಗಳು ಜಿಲ್ಲಾ ಕೇಂದ್ರಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ.<br><br>2) ಪ್ರತಿಯೊಂದು ವಲಯಕ್ಕೆ ಒಬ್ಬರಂತೆ ಒಟ್ಟು ಎಂಟು ವಲಯಗಳಲ್ಲಿ ಎಂಟು ಪೊಲೀಸ್ ಅಧೀಕ್ಷಕರು ಹಾಗೂ ಬೆಂಗಳೂರು ಮುಖ್ಯ ಕಛೇರಿಯಲ್ಲಿ ಪೊಲೀಸ್ ಅಧೀಕ್ಷಕರು (ಆಡಳಿತ) ಮತ್ತು ಪೊಲೀಸ್ ಅಧೀಕ್ಷಕರು (ಕೇಂದ್ರ ಸ್ಥಾನ) ರವರು ಒಟ್ಟು 10 ಪೊಲೀಸ್ ಅಧೀಕ್ಷಕರ ದರ್ಜೆಯ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>3) ಇದಲ್ಲದೆ ಪ್ರತಿಯೊಂದು ಘಟನಾವಳಿಗಳನ್ನು ಗಮನಿಸಲು ಮತ್ತು ಸೂಕ್ತ ಕ್ರಮ ತೆಗದುಕೊಳ್ಳುವ ಸಲುವಾಗಿ ಪ್ರೊಟೆಕ್ಷನ್ ಸೆಲ್ ಕರ್ತವ್ಯ ನಿರ್ವಹಿಸುತ್ತಿದೆ.<br><br>ರಾಜ್ಯದಲ್ಲಿ ಕೆಳದ ಮೂರು ವರ್ಷಗಳಲ್ಲಿ ದಾಖಲಾದ ಎಸ್.ಸಿ/ಎಸ್.ಟಿ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಕೆಳಗಿನಂತಿದೆ.<br><br><table><tr><th>ಕ್ರ. ಸಂ</th><th>ವರ್ಷ</th><th>ಎಸ್.ಸಿ/ಎಸ್.ಟಿ ದೌರ್ಜನ್ಯ ಪ್ರಕರಣಗಳ ಸಂಖ್ಯೆ</th></tr><tr><td>1</td><td>2023</td><td>2447</td></tr><tr><td>2</td><td>2024</td><td>2396</td></tr><tr><td>3</td><td>2025</td><td>2515</td></tr><tr><td></td><td></td><td>7358</td></tr></table><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಇರಿಸಿದೆ.</td>
</tr>
</table>

ಸಂಖ್ಯೆ: ಒಇ 72 ಪಿಇಜಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

## ಅನುಬಂಧ-ಅ

| ಕ್ರ. ಸಂ | ಜಿಲ್ಲೆ | 2023 | 2024 | 2025 |
|---|---|---|---|---|
| 1. | ಬೆಂಗಳೂರು ನಗರ | 338 | 328 | 324 |
| 2. | ಮೈಸೂರು ನಗರ | 27 | 27 | 27 |
| 3. | ಹುಬ್ಬಳ್ಳಿ- ಧಾರವಾಡ ನಗರ | 41 | 51 | 52 |
| 4. | ಮಂಗಳೂರು ನಗರ | 37 | 21 | 35 |
| 5. | ಬೆಳಗಾವಿ ನಗರ | 21 | 37 | 25 |
| 6. | ಕಲಬುರಗಿ ನಗರ | 46 | 50 | 39 |
| 7. | ಬೆಂಗಳೂರು ಜಿಲ್ಲೆ | 86 | 86 | 82 |
| 8. | ತುಮಕೂರು ಜಿಲ್ಲೆ | 106 | 123 | 120 |
| 9. | ಕೋಲಾರ ಜಿಲ್ಲೆ | 66 | 54 | 40 |
| 10. | ಕೆ.ಜಿ.ಎಫ್ ಜಿಲ್ಲೆ | 26 | 20 | 09 |
| 11. | ರಾಮನಗರ ಜಿಲ್ಲೆ | 89 | 63 | 58 |
| 12. | ಚಿಕ್ಕಬಳ್ಳಾಪುರ ಜಿಲ್ಲೆ | 79 | 62 | 58 |
| 13. | ಮೈಸೂರು ಜಿಲ್ಲೆ | 68 | 44 | 31 |
| 14. | ಚಾಮರಾಜನಗರ ಜಿಲ್ಲೆ | 49 | 37 | 47 |
| 15. | ಹಾಸನ ಜಿಲ್ಲೆ | 93 | 96 | 127 |
| 16. | ಕೊಡಗು ಜಿಲ್ಲೆ | 48 | 52 | 34 |
| 17. | ಮಂಡ್ಯ ಜಿಲ್ಲೆ | 78 | 68 | 84 |
| 18. | ದಾವಣಗೆರೆ ಜಿಲ್ಲೆ | 87 | 63 | 67 |
| 19. | ಶಿವಮೊಗ್ಗ ಜಿಲ್ಲೆ | 92 | 83 | 96 |
| 20. | ಚಿತ್ರದುರ್ಗ ಜಿಲ್ಲೆ | 57 | 64 | 71 |
| 21. | ಹಾವೇರಿ ಜಿಲ್ಲೆ | 43 | 48 | 65 |
| 22. | ದಕ್ಷಿಣ ಕನ್ನಡ ಜಿಲ್ಲೆ | 52 | 32 | 32 |
| 23. | ಉತ್ತರ ಕನ್ನಡ ಜಿಲ್ಲೆ | 40 | 65 | 58 |
| 24. | ಉಡುಪಿ ಜಿಲ್ಲೆ | 42 | 43 | 57 |
| 25. | ಚಿಕ್ಕಮಗಳೂರು ಜಿಲ್ಲೆ | 99 | 64 | 88 |
| 26. | ಬೆಳಗಾವಿ ಜಿಲ್ಲೆ | 100 | 112 | 143 |
| 27. | ಗದಗ ಜಿಲ್ಲೆ | 45 | 42 | 50 |
| 28. | ಧಾರವಾಡ ಜಿಲ್ಲೆ | 36 | 35 | 44 |
| 29. | ವಿಜಯಪುರ ಜಿಲ್ಲೆ | 74 | 94 | 78 |
| 30. | ಬಾಗಲಕೋಟೆ ಜಿಲ್ಲೆ | 53 | 60 | 71 |
| 31. | ಕಲಬುರಗಿ ಜಿಲ್ಲೆ | 42 | 54 | 44 |
| 32. | ಬೀದರ ಜಿಲ್ಲೆ | 55 | 36 | 45 |
| 33. | ಯಾದಗಿರಿ ಜಿಲ್ಲೆ | 36 | 64 | 84 |
| 34. | ಬಳ್ಳಾರಿ ಜಿಲ್ಲೆ | 29 | 36 | 33 |
| 35. | ರಾಯಚೂರು ಜಿಲ್ಲೆ | 88 | 86 | 114 |
| 36. | ಕೊಪ್ಪಳ ಜಿಲ್ಲೆ | 41 | 65 | 59 |
| 37. | ವಿಜಯನಗರ ಜಿಲ್ಲೆ | 38 | 28 | 22 |
| 38. | ರೈಲ್ವೇಸ್ | 0 | 3 | 2 |
| ಒಟ್ಟು | | 2447 | 2396 | 2515 |